# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1004 |
| ಉತ್ತರಿಸಬೇಕಾದ ದಿನಾಂಕ | : | 17.12.2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿಕರಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಮತ್ತು ಕನಿಷ್ಠ ಬಡ್ಡಿದರದಲ್ಲಿ ಬೆಳೆಸಾಲ ನೀಡುವ ಕುರಿತು ಇಲಾಖೆ ಯಾವ ನಿಯಮಗಳನ್ನು ರಚಿಸಿದೆ; ಅವುಗಳನ್ನು ಅನುಷ್ಠಾನಕ್ಕೆ ತರಲಾಗಿದೆಯೇ; | 2024-25 ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಗರಿಷ್ಠ ರೂ.5.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ನೀಡುವ ಯೋಜನೆಯಲ್ಲಿ ರಚಿಸಿರುವ ನಿಯಮಗಳು ಈ ಕೆಳಗಿನಂತಿರುತ್ತವೆ.<br><br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್, ಪಿಕಾರ್ಡ್ ಬ್ಯಾಂಕುಗಳು ಹಾಗೂ ಡಿಸಿಸಿ ಬ್ಯಾಂಕುಗಳು ರೂ. 5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೈತರಿಗೆ ವಿತರಿಸಬೇಕಿರುತ್ತದೆ.<br><br>2. ರೈತನ ಭೂಮಿ ಅಥವಾ ವಾಸ ಸ್ಥಳ ಇರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಬೇಕು. ಸಂಘ ನಿಷ್ಕ್ರಿಯ ಆಗಿದ್ದಲ್ಲಿ ಸಂಬಂಧಿಸಿದ ಡಿಸಿಸಿ ಬ್ಯಾಂಕಿನಲ್ಲಿ ಅರ್ಜಿ ಸಲ್ಲಿಸಬೇಕು.<br><br>3. ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೇ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.<br><br>4. ಅಲ್ಪಾವಧಿ ಕೃಷಿ ಸಾಲ ವಿತರಿಸಲು ರೈತನು ಹೊಂದಿರುವ ಭೂಹಿಡುವಳಿಗೆ ಮತ್ತು ಬೆಳೆಯುವ ಬೆಳೆಗೆ, ರಾಜ್ಯ ತಾಂತ್ರಿಕ ಸಲಹಾ ಸಮಿತಿ ಪ್ರತೀ ಬೆಳೆಗೆ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಬೆಳೆ ಸಾಲದ ಗರಿಷ್ಠ ಮಿತಿಯಾದ ಕ್ರಮಿಕ ಪತ್ತಿನ ಮಿತಿ (NCL) ಗೆ ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ಅನುಮೋದನೆ ಪಡೆದಿರತಕ್ಕದ್ದು ಹಾಗೂ ಬೆಳೆ ವಿಮೆ ಒಳಗೊಂಡಂತೆ ಸದರಿ ಮಿತಿ ಅಥವಾ ರೂ.5.00 ಲಕ್ಷ ಯಾವುದು ಕಡಿಮೆಯೋ ಆ ಮಿತಿಗೆ ಮಾತ್ರ ಸಾಲ ದೊರೆಯುತ್ತದೆ.<br><br>5. ಸಂಘಗಳು ಹೆಚ್ಚಿನ ಪ್ರಮಾಣದ ಸಾಲ ವಿತರಿಸಿದ್ದರೂ ಸಹ ಶೂನ್ಯ ಬಡ್ಡಿ ದರ ರೂ.5 ಲಕ್ಷಗಳ ವರೆಗಿನ ಸಾಲಕ್ಕೆ ಅನ್ವಯವಾಗುತ್ತದೆ.<br><br>6. ರೈತನು ಪಡೆದ ಸಾಲವನ್ನು ಸಂಘವು ನಿಗದಿಪಡಿಸಿದ ಗಡುವು ದಿನಾಂಕ ಅಥವಾ ಒಂದು ವರ್ಷ ಇದರಲ್ಲಿ ಯಾವುದು ಕಡಿಮೆಯೋ ಆ ಅವಧಿಯಲ್ಲಿ |

| | | |
|---|---|---|
| | | ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ.<br><br>7. 2024-25 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು 35.10 ಲಕ್ಷ ರೈತರಿಗೆ ರೂ.25000 ಕೋಟಿ ಅಲ್ಪಾವಧಿ ಕೃಷಿ ಸಾಲ ಮತ್ತು 0.70 ಲಕ್ಷ ರೈತರಿಗೆ ರೂ.1600 ಕೋಟಿ ಮಧ್ಯಮಾವಧಿ ಹಾಗೂ ಧೀರ್ಘಾವಧಿ ಕೃಷಿ ಸಾಲ ವಿತರಿಸುವ ಗುರಿ ನಿಗದಿಪಡಿಸಲಾಗಿದೆ.<br><br>ಜಿಲ್ಲಾ ಸಹಕಾರ ಬ್ಯಾಂಕುಗಳು ನಬಾರ್ಡ್‌ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡುವುದರ ಮೂಲಕ ಅನುಷ್ಠಾನಕ್ಕೆ ತರಲಾಗಿದೆ. |
| ಆ) | 2024-25 ನೇ ಸಾಲಿನಲ್ಲಿ ಕೃಷಿಕರಿಗೆ ಶೂನ್ಯ ಬಡ್ಡಿದರದಲ್ಲಿ 5 ಲಕ್ಷ ರೂಪಾಯಿವರೆಗೆ ಮತ್ತು ಶೇಕಡ 3.00 ರ ಬಡ್ಡಿದರದಲ್ಲಿ 15.00 ಲಕ್ಷ ರೂಪಾಯಿಗಳವರೆಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲ ನೀಡುವ ಕುರಿತು ಇಲಾಖೆ ಹೊರಡಿಸಿದ ದಿನಾಂಕ: 01.08.2024 ರ ಸುತ್ತೋಲೆಯಂತೆ ಎಷ್ಟು ಜಿಲ್ಲೆಗಳಲ್ಲಿ ಎಷ್ಟು ಮೊತ್ತದ ಸಾಲ ವಿತರಿಸಿದೆ; ಮತ್ತು ಎಷ್ಟು ಸಂಖ್ಯೆಯ ಸಾಲಗಳ ಪ್ರಸ್ತಾವನೆಗಳು ಪ್ರಕ್ರಿಯೆಯಲ್ಲಿದೆ; | 2024-25 ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿ ದರದಲ್ಲಿ ರೂ.5.00 ಲಕ್ಷಗಳ ಮಿತಿಯಲ್ಲಿ 1696922 ರೈತರಿಗೆ ರೂ.14395.05 ಕೋಟಿಗಳ ಬೆಳೆ ಸಾಲ ಮತ್ತು ಶೇ.3 ರ ಬಡ್ಡಿ ದರದಲ್ಲಿ ಗರಿಷ್ಠ ರೂ.15.00 ಲಕ್ಷಗಳವರೆಗೆ 15837 ರೈತರಿಗೆ ರೂ.868.03 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲ ವಿತರಿಸಲಾಗಿದೆ.<br><br>ರೂ.5 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರಕ್ಕೆ ಸಂಬಂಧಿಸಿದಂತೆ 115694 ಅರ್ಜಿಗಳು ಮತ್ತು ಶೆ.3.00 ರ ಬಡ್ಡಿದರದಲ್ಲಿ 15.00 ಲಕ್ಷ ರೂಪಾಯಿಗಳವರೆಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲಕ್ಕೆ ಸಂಬಂಧಿಸಿದಂತೆ 7051 ಅರ್ಜಿಗಳು ಸಾಲ ಮಂಜೂರು ಮಾಡಲು ಡಿಸಿಸಿ ಬ್ಯಾಂಕುಗಳ ಹಂತದಲ್ಲಿ ಪರಿಶೀಲನೆಯಲ್ಲಿವೆ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಎಷ್ಟು ಜನ ಕೃಷಿಕರಿಗೆ ಎಷ್ಟು ಮೊತ್ತದ ಬೆಳೆ ಮತ್ತು ಕೃಷಿ ಸಂಬಂಧಿತ ಸಾಲ ನೀಡಲಾಗಿದೆ ಮತ್ತು ಸಾಲಗಳ ಪ್ರಸ್ತಾವನೆಗಳು ಪ್ರಸ್ತುತ ಪ್ರಕ್ರಿಯೆಯಲ್ಲಿದೆ?<br>(ತಾಲ್ಲೂಕುವಾರು ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನವೆಂಬರ್ ಅಂತ್ಯದವರೆಗೆ 93881 ರೈತರಿಗೆ ರೂ.1675.56 ಕೋಟಿಗಳ ಬೆಳೆ ಸಾಲ ವಿತರಿಸಲಾಗಿದೆ. ಈ ಪೈಕಿ ರೂ.3 ಲಕ್ಷಗಳ ಮಿತಿಯಲ್ಲಿ 2493 ಹೊಸ ರೈತರಿಗೆ ರೂ.37.67 ಕೋಟಿಯನ್ನು ಡಿಸಿಸಿ ಬ್ಯಾಂಕಿನ ಬಂಡವಾಳದಲ್ಲಿ ಮತ್ತು ರೂ.3 ಲಕ್ಷಗಳಿಂದ ರೂ.5 ಲಕ್ಷಗಳ ಮಿತಿಯಲ್ಲಿ 675 ಹೊಸ ರೈತರಿಗೆ ರೂ.27.38 ಕೋಟಿಯನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸ್ವಂತ ಬಂಡವಾಳದಲ್ಲಿ ಬೆಳೆ ಸಾಲ ವಿತರಿಸಲಾಗಿದೆ.<br><br>ಶೇ.3 ರ ಬಡ್ಡಿ ದರದಲ್ಲಿ ಗರಿಷ್ಠ ರೂ.15.00 ಲಕ್ಷಗಳವರೆಗೆ 8890 ರೈತರಿಗೆ ರೂ.226.78 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲ ವಿತರಿಸಲಾಗಿದೆ. ತಾಲ್ಲೂಕವಾರು ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

| | | |
|---|---|---|
| | | ದಕ್ಷಿಣ ಕನ್ನಡ ಡಿಸಿಸಿ ಬ್ಯಾಂಕಿನಲ್ಲಿ ಮಂಜೂರು ಮಾಡಲು ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.<br><br>ಬಂಡವಾಳದ ಕೊರತೆಯಿಂದಾಗಿ ರೈತರ ರೂ. 3.00 ಲಕ್ಷಕ್ಕಿಂತ ಹೆಚ್ಚಿಗೆ ರೂ. 5.00 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ವಿತರಿಸಿದ ನಂತರ ಹಂತ ಹಂತವಾಗಿ ಬಂಡವಾಳ ಕ್ರೋಢೀಕರಿಸಿಕೊಂಡು ರೂ.3 ಲಕ್ಷದಿಂದ ರೂ.5 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರೈಸಲಾಗುವುದು. |

**ಸಂಖ್ಯೆ: ಸಿಒ 303 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ಯಾಕ್ಸ್ ಗಳಲ್ಲಿ 2024-25 ರಲ್ಲಿ ವಿತರಿಸಿದ ಮಧ್ಯಮಾವಧಿ ಸಾಲದ ವಿವರ (ರೂ.ಕೋಟಿಗಳಲ್ಲಿ)

| ಜಿಲ್ಲೆಯ ಹೆಸರು | ತಾಲ್ಲೂಕು | ಸರ್ಕಾರ ನೀಡಿದ ಗುರಿಯನ್ವಯ ಜಿಲ್ಲಾ ಬ್ಯಾಂಕು ತಾಲ್ಲೂಕವಾರು ನಿಗದಿಪಡಿಸಕೊಂಡ ನೀಡಿದ ಗುರಿ | | ದಿ:30.11.2024 ರವರೆಗೆ ವಿತರಿಸಿದ ಸಾಲ | | ಸಾಲ ಮಂಜೂರಿಗೆ ಪ್ರಕ್ರಿಯೆಯಲ್ಲಿರುವ ರೈತರ ಸಂಖ್ಯೆ |
|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ |
| ದಕ್ಷಿಣ ಕನ್ನಡ | ಮಂಗಳೂರು | 1000 | 21.05 | 501 | 13.42 | 0 |
| | ಮೂಡಬಿದ್ರೆ | 250 | 4.46 | 106 | 3.92 | 0 |
| | ಬಂಟ್ವಾಳ | 3850 | 80.15 | 1906 | 48.06 | 0 |
| | ಬೆಳ್ತಂಗಡಿ | 4250 | 88.56 | 2106 | 46.04 | 0 |
| | ಪುತ್ತೂರು | 1150 | 23.85 | 566 | 19.52 | 0 |
| | ಕಡಬ | 1800 | 38.30 | 911 | 26.11 | 0 |
| | ಸುಳ್ಯ | 3122 | 64.63 | 1537 | 45.44 | 0 |
| | **ಒಟ್ಟು** | **15422** | **321.00** | **7633** | **202.51** | **0** |
| ಉಡುಪಿ | ಕಾರ್ಕಳ | 200 | 4.14 | 59 | 1.50 | 0 |
| | ಹೆಬ್ರಿ | 400 | 6.60 | 129 | 2.39 | 0 |
| | ಕುಂದಾಪುರ | 2000 | 33.47 | 621 | 12.12 | 0 |
| | ಬೈಂದೂರು | 919 | 15.68 | 285 | 5.68 | 0 |
| | ಉಡುಪಿ | 140 | 1.78 | 42 | 0.65 | 0 |
| | ಕಾಪು | 50 | 1.19 | 16 | 0.43 | 0 |
| | ಬ್ರಹ್ಮಾವರ | 350 | 4.14 | 105 | 1.50 | 0 |
| | **ಒಟ್ಟು** | **4059** | **67.00** | **1257** | **24.27** | **0** |
| | **ಒಟ್ಟು** | **19481** | **388.00** | **8890** | **226.78** | **0** |

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1004 ಕ್ಕೆ ಅನುಬಂಧ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ಯಾಕ್ಸ್ ಗಳಲ್ಲಿ 2024-25 ರಲ್ಲಿ ವಿತರಿಸಿದ ಬೆಳೆ ಸಾಲದ ವಿವರ (ರೂ.ಕೋಟಿಗಳಲ್ಲಿ)

| ಜಿಲ್ಲೆಯ ಹೆಸರು | ತಾಲ್ಲೂಕು | ಸರ್ಕಾರ ನೀಡಿದ ಗುರಿಯನ್ವಯ ಜಿಲ್ಲಾ ಬ್ಯಾಂಕು ತಾಲ್ಲೂಕವಾರು ನಿಗದಿಪಡಿಸಕೊಂಡ ನೀಡಿದ ಗುರಿ | | ದಿ:30.11.2024 ರವರೆಗೆ ವಿತರಿಸಿದ ಸಾಲ | | ಸಾಲ ಮಂಜೂರಿಗೆ ಪ್ರಕ್ರಿಯೆಯಲ್ಲಿರುವ ರೈತರ ಸಂಖ್ಯೆ |
|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ |
| ದಕ್ಷಿಣ ಕನ್ನಡ | ಮಂಗಳೂರು | 4000 | 48.59 | 1963 | 33.48 | 0 |
| | ಮೂಡಬಿದ್ರೆ | 3900 | 74.76 | 2547 | 51.65 | 0 |
| | ಬಂಟ್ವಾಳ | 19500 | 318.48 | 13363 | 219.76 | 0 |
| | ಬೆಳ್ತಂಗಡಿ | 26000 | 436.03 | 17074 | 301.02 | 0 |
| | ಪುತ್ತೂರು | 14500 | 278.48 | 9472 | 192.18 | 0 |
| | ಕಡಬ | 15900 | 322.97 | 10430 | 222.62 | 0 |
| | ಸುಳ್ಯ | 18662 | 389.69 | 12369 | 269.04 | 0 |
| | **ಒಟ್ಟು** | **102462** | **1869.00** | **67218** | **1289.8** | **0** |
| ಉಡುಪಿ | ಕಾರ್ಕಳ | 4300 | 85.36 | 2415 | 47.27 | 0 |
| | ಹೆಬ್ರಿ | 4860 | 84.30 | 2717 | 47.03 | 0 |
| | ಕುಂದಾಪುರ | 24850 | 335.96 | 13928 | 187.58 | 0 |
| | ಬೈಂದೂರು | 7471 | 88.86 | 4172 | 49.63 | 0 |
| | ಉಡುಪಿ | 200 | 2.62 | 105 | 1.48 | 0 |
| | ಕಾಪು | 450 | 4.90 | 248 | 2.73 | 0 |
| | ಬ್ರಹ್ಮಾವರ | 5500 | 89.00 | 3078 | 50.09 | 0 |
| | **ಒಟ್ಟು** | **47631** | **691.00** | **26663** | **385.81** | **0** |
| **ಒಟ್ಟು** | | **150093** | **2560.00** | **93881** | **1675.56** | **0** |